


## ಉಪಯುಕ್ತ ಮಾಹಿತಿ

'ಮಗು ಊಟ ಮಾಡಲ್ವೆ?' ಡಾ.ಜಯಲಕ್ಷ್ಮಿ ಹಾಗೂ ಎಂ.ಡಿ.ಸೂರ್ಯಕಾಂತ ಅವರ ಮುಖಪುಟ ಲೇಖನಗಳು ಉಪಯುಕ್ತ ಮಾಹಿತಿ ನೀಡಿವೆ.

–ಪಿ.ಗೋವಿಂದರಾಜ್, ಶಿವಮೊಗ್ಗ/
ವಿಭಾ ಮುರಳೀಧರ್, ತುಮಕೂರು

## ವಸ್ತುನಿಷ್ಠ?

'ಬ್ಲ್ಯಾಕ್ ಬಾಕ್ಸ್' (ನಿಮಗೆಷ್ಟು ಗೊತ್ತು?) ವಿಮಾನದ ಬ್ಲ್ಯಾಕ್‌ಬಾಕ್ಸ್ ಬಣ್ಣ ವಾಸ್ತವವಾಗಿ ಕಪ್ಪಲ್ಲ; ಕೆಂಪು (ಕಿತ್ತಲೆ ಬಣ್ಣ?) ಎಂಬುದು ಸ್ವಾರಸ್ಯದ ಅಂಶ. ಎಂದಮೇಲೆ, ವಿಜ್ಞಾನ ಅಥವಾ ಶಾಸ್ತ್ರ ಕೂಡ ಸಂಪೂರ್ಣ ವಸ್ತುನಿಷ್ಠವಲ್ಲ ಎಂದ ಹಾಗಾಯಿತು! ಇನ್ನು, ಕಲೆ ಹೇಗೆ ವಸ್ತುನಿಷ್ಠ?

–ಸಿ.ಪಿ.ಕೆ. ಮೈಸೂರು

## ಇಲ್ಲೂ ಸಿಗುತ್ತವೆ

'ಕರಾವಳಿಯ ಇಬ್ಬೆಹಣ್ಣು' ಓದಿದೆ. ಲೇಖಕ ಭಂಡಾರಿ ಕಾರವಾರದಿಂದ ಹೊನ್ನಾವರದ ತನಕ ಈ ಹಣ್ಣು ಕಾಣಸಿಗುವುದಾಗಿ ಹೇಳಿದ್ದಾರೆ. ಭಟ್ಕಳ, ಮುರ್ಡೇಶ್ವರ, ಕಾಯ್ಕಿಣಿಗಳಲ್ಲಿ ಸಹ ಈ ಇಬ್ಬುರಲ (ಇಬ್ಬೆ) ಹಣ್ಣು ಬೆಳೆಯುತ್ತಾರೆ.

–ನಾರಾಯಣ ಯಾಜಿ, ಶಿರಾಲಿ (ಉ.ಕ. ಜಿಲ್ಲೆ)

## ನಾವೂ ಸಹ ಬದಲಾಗಬೇಕು!

ಡಾ.ಎಚ್.ಎಸ್.ಮೋಹನ್ ಅವರ 'ಭಾರತೀಯರು ಪ್ರಯೋಗ ಪಶುಗಳು' ಓದಿದೆ. ಭಾರತದ ವಿವಿಧ ಆಸ್ಪತ್ರೆಗಳಲ್ಲಿನ ರೋಗಿಗಳನ್ನು ಪ್ರಯೋಗ ಪಶುಗಳನ್ನಾಗಿಸಿ, ಅವರ ಸಾವುನೋವಿಗೆ ಕಾರಣರಾಗುತ್ತಿರುವ ಬಹುರಾಷ್ಟ್ರೀಯ ಔಷಧ ಕಂಪನಿಗಳ ಕಾರ್ಯ ನಿಂದನಾರ್ಹವೇ ಸರಿ. ಆದರೆ ತಜ್ಞರು, ತಜ್ಞಾತಿ ತಜ್ಞರೆನಿಸಿಕೊಳ್ಳುವ ವೈದ್ಯರು ಕೆಲವು ಸಲ ರೋಗಿಗೆ ಅನಗತ್ಯ ತಪಾಸಣೆಗಳನ್ನು, ಮುಂದೊಮ್ಮೆ ತೊಂದರೆ ಕೊಡಬಹುದಾದ ಔಷಧಿಗಳನ್ನೂ ಧಾರಾಳವಾಗಿ ನೀಡುತ್ತಾರೆ. ಇಂತಹ ಪ್ರಯೋಗಗಳೂ ನಿಲ್ಲಬೇಕಲ್ಲವೇ?

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

## ಗಝಲ್ ದೊರೆಗೆ ನಮನ

ಗಝಲ್ ದೊರೆ ಜಗಜಿತ್ (ಬರಹ: ಸುಧಾ ಹೆಗಡೆ) ಹಾಡಿನ ಝರಿಯೆಂದರೆ– ಎಲ್ಲಿಯೋ ಹುಟ್ಟಿ ಮತ್ತೆಲ್ಲಿಯೋ ಕುಣಿಯುತ್ತಾ, ಹರಿದು ಸಮುದ್ರತೀರವ ಸೇರುವ ನದಿಯಂತಿರುತ್ತದೆ.

–ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

## ಉತ್ತಮ ಮಾಹಿತಿ

ಬಿ.ಎಸ್ಸಿ. ನಂತರ ಮುಂದೇನು? ಕೆ. ರಾಘವೇಂದ್ರರ ಲೇಖನ ಉತ್ತಮ ಮಾಹಿತಿ ಒದಗಿಸಿದೆ.

–ದೀಪಕ್, ಕುಂಬದಕೋಣೆ

## ಇಷ್ಟವಾದ ಕಥೆ

ಅಶ್ವಿನಿ ಹರಿದಾಸ್ ಭಟ್ ಅವರ 'ಅಸಂಭವ' ಕಥೆ ಇಷ್ಟವಾಯಿತು.

ವೈ.ಯಂ.ಚಂದ್ರಶೇಖರ್, ಸಿದ್ದಾಪುರ

## ಆಗ ಮಿನಿ, ಈಗ ಕಥೆ

'ಅಸಂಭವ'ಕಥೆ 'ಮಯೂರ' ಮಾಸಪತ್ರಿಕೆಯಲ್ಲಿ 1986ನೇ ನವೆಂಬರ್‌ನಿಂದ 1987 ಫೆಬ್ರುವರಿ ತನಕ ಪ್ರಕಟವಾಗಿದ್ದ ಕಿರು ಧಾರಾವಾಹಿ 'ಅರಗಿನ ಮನೆ' (ಆ ಕಿರು ಕಾದಂಬರಿ ಹರಿದಾಸ ಭಟ್ ಅವರದು. ಈ ಕಥೆ ಅಶ್ವಿನಿ ಹರಿದಾಸ್ ಭಟ್‌ರದು!)ಯ ಸಂಕ್ಷಿಪ್ತ ರೂಪವಾಗಿದೆ. ಪಾತ್ರಗಳ ಹೆಸರುಗಳು ಮಾತ್ರ ಬದಲಾಗಿವೆ.

–ಮೃಗಶಿರಾ, ಬೆಂಗಳೂರು

## ಗೌರವಯುತ ಪರಿಚಯ


ನಾಟಕ ಅಕಾಡೆಮಿ ಅಧ್ಯಕ್ಷರಾಗಿರುವ ರಂಗ ಕಲಾವಿದೆ ಮಾಲತಿ ಸುಧೀರ್ ಬಗೆಗೆ ಗುಡಿಹಳ್ಳಿ ನಾಗರಾಜರ ಲೇಖನ ಗೌರವಯುತ ಪರಿಚಯ ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ. ನನ್ನ ಪತ್ನಿ ದಲಿತ ಮಹಿಳೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಸುಧೀರ್ ಬಗ್ಗೆ ಇದ್ದ ಗೌರವ ಮತ್ತಷ್ಟು ಹೆಚ್ಚಾಯಿತು.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ/ ಎಚ್. ಆನಂದ ಕುಮಾರ್,
ಚಿತ್ರದುರ್ಗ/ ಕೊಹಿಮ, ಬಸರಕೋಡು/ ಸು. ವಿಜಯಲಕ್ಷ್ಮಿ
ಶಿವಮೊಗ್ಗ/ಭಾನುಮತಿ ಭೋಜರಾಜ್, ಬಂಟ್ವಾಳ

## ಎಳೆಯರ ಕಥೆಗೆ ಹೊಸ ಆಯಾಮ

ಎಳೆಯರ ಅಂಗಳದಲ್ಲಿ ಲಲಿತಾ ಹೊಸಪ್ಯಾಟಿ ಹುನಗುಂದ ಅವರ ಕಥೆ 'ಎತ್ತಿನ ಜೂಲ' ಮಕ್ಕಳ ಮನ ಮಿಡಿಯುವಂತಹದು. ಹಳೆ ತಂತ್ರದಲ್ಲಿ ಒಡಮೂಡಿದ ಈ ನೀತಿ ಕಥೆಯಲ್ಲಿ ಮಕ್ಕಳಿಗೆ ಹಿತೋಪದೇಶದ ಭಾರವಿಲ್ಲ. ನಡು ನಡುವೆ ಬಳಸಿದ ಹಾಡುಗಳು ಹಾಗೂ ಜಾನಪದ ನುಡಿಗಳಿಂದ ಮುದ್ದು ಮಕ್ಕಳು ಮುದಗೊಳ್ಳುತ್ತಾರೆ. ಕಥಾ ರಚನೆ ಹೊಸ ಆಯಾಮ ತೋರಿದಂತಾಗಿದೆ.

–ಕಂಚ್ಯಾಣಿ ಶರಣಪ್ಪ, ವಿಜಾಪುರ



## ಮೂಲಕ್ಕೆ ಚ್ಯುತಿ ತಾರದ ಕಥೆ

ಕವಿ ಲಕ್ಷ್ಮೀಶನ ಜೈಮಿನಿ ಭಾರತ ಆಧಾರಿತ ಗದ್ಯ ನಿರೂಪಣೆ 'ಮತ್ತೆ ಮಹಾಭಾರತ' ಬೇಂದ್ರೆಯವರ ಅಭಿಮಾನಿ ಶಿಷ್ಯ ಡಾ. ಜಿ. ಕೃಷ್ಣಪ್ಪನವರಿಂದ ಸರಳವಾಗಿ, ಮೂಲ ಕಥೆಗೆ ಭಂಗ ಉಂಟಾಗದ ಹಾಗೆ ನಿರೂಪಿತವಾಗಿರುವುದು 'ಸುಧಾ' ಪತ್ರಿಕೆಯ ಹೆಮ್ಮೆಯ ಕೊಡುಗೆ. ಕಥೆಗೆ ತಕ್ಕ ಹಾಗೆ ಮನೋಹರ್ ಚಿತ್ರಗಳು ಅರ್ಥಪೂರ್ಣವಾಗಿವೆ.

–ಯು.ಎನ್. ಸಂಗನಾಳಮಠ, ಹೊನ್ನಾಳಿ

## ಚಂದಮಾಮ, ಬಾಲಮಿತ್ರ ನೆನಪು

'ಮತ್ತೆ ಮಹಾಭಾರತ' ಬಾಲ್ಯದಲ್ಲಿ ಓದುತ್ತಿದ್ದ ಚಂದಮಾಮ, ಬಾಲಮಿತ್ರದ ಕಥೆಗಳನ್ನು ನೆನಪಿಸುತ್ತದೆ. ಹಾಗೆಯೇ ಚಂಡಿ ಕಥೆ ಮತ್ತು ಸುದನ್ವ ಕಾಳಗಗಳು ಚಿಕ್ಕಂದಿನಲ್ಲಿ ನೋಡುತ್ತಿದ್ದ ಯಕ್ಷಗಾನಗಳನ್ನು ನೆನಪಿಸುತ್ತವೆ. ವರ್ಣ ಚಿತ್ರಗಳು ಪ್ಲಸ್ ಪಾಯಿಂಟ್‌ಗಳು.

–ಪಿ.ವಿ. ದೇವರಾಯ ಮಲ್ಯ, ಎಚ್.ವಿದ್ಯಾ, ಮೈಸೂರು

## ರಾಜಕಾರಣಿಗಳು ಓದಬೇಕು

'ಮತ್ತೆ ಮಹಾಭಾರತ'ವನ್ನು ಈಗಿನ ಆಡಳಿತ ಪಕ್ಷದ ಧುರೀಣರು ಮತ್ತೆ–ಮತ್ತೆ ಓದಿ ರಾಜ್ಯವನ್ನು ಹೇಗೆ ನಡೆಸಬೇಕೆಂದು ತಿಳಿಯಬೇಕು.

–ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

## *ದ.ರಾ. ಬೇಂದ್ರೆ ಲೇಖನ ಸ್ಪರ್ಧೆ*

ಬೆಂಗಳೂರಿನ ದ.ರಾ. ಬೇಂದ್ರೆ ಕಾವ್ಯಕೂಟವು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ಬೇಂದ್ರೆ ಸಾಹಿತ್ಯದಲ್ಲಿ ಶೋಷಿತ ಪರವಾದ ದನಿ' ಎಂಬ ವಿಷಯವಾಗಿ ದ.ರಾ.ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆ–5ನ್ನು ನಡೆಸುತ್ತಿದೆ.

4 ಸಾವಿರ, 3 ಸಾವಿರ ಹಾಗೂ 2 ಸಾವಿರ ರೂ.ಗಳ ಮೂರು ನಗದು ಬಹುಮಾನ ನೀಡಲಾಗುವುದು. 2,500 ಪದಗಳಿಗೆ ಮೀರದಂತೆ ನವೆಂಬರ್ 21ರ ಒಳಗಾಗಿ ಡಾ. ಜಿ. ಕೃಷ್ಣಪ್ಪ, ಅಧ್ಯಕ್ಷರು, ದ.ರಾ. ಬೇಂದ್ರೆ ಕಾವ್ಯಕೂಟ, 22, ಶ್ರೀ ಗುರುದತ್ತ ನಿಲಯ, 1ನೇ ತಿರುವು, ನೇತಾಜಿ ನಗರ, ಮತ್ತಿಕೆರೆ, ಬೆಂಗಳೂರು– 560054 ಈ ವಿಳಾಸಕ್ಕೆ ಕಳುಹಿಸಿ ಕೊಡಬೇಕು. ಹೆಚ್ಚಿನ ಮಾಹಿತಿಗೆ 080–23602402 ಸಂಪರ್ಕಿಸಿ.




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಮೈಸೂರು ಖಾಯಂ ಮನೆ ವಿಳಾಸ ನಂ.8949, ವಿಜಯನಗರ 4ನೇ ಸ್ಟೇಜ್, ಎಸ್.ಆರ್.ಎಸ್. ಗೇಟ್ ಹತ್ತಿರ, ಯಶಸ್ವಿನಿ ಕಲ್ಯಾಣಮಂಟಪದ ಹತ್ತಿರ, ಹುಣಸೂರು ರಸ್ತೆ, ಹೂಟಗಳ್ಳಿ, ಮೈಸೂರು–18.

ಬೆಂಗಳೂರು ಮೈಸೂರು 9880444450

